# ಯಾವ ಮೋಹನ ಮುರಲಿ ಕರೆವುದೋ?

ಕಣ್ಣಮುಂದಿನ ಕನಸು ಕರಗಿ, ಮೊಬೈಲಿನಲ್ಲಿ ಏಳಕ್ಕೆ ಸೆಟ್ ಮಾಡಿದ್ದ ಅಲಾರ್ಮ್ ಕಿವಿಗಳಲ್ಲಿ ಮೊಳಗಿ, ಬೆಳಗಾದಾಗ... ಬೇಸರದಿಂದಲೇ ಎದ್ದು ಕಣ್ಣೇ ಬಿಡದೇ ಕುರುಡನ ಹಾಗೆ, ಹಾಗೇ ತಡವರಿಸುತ್ತ ಹೋಗಿ ಬ್ರಶ್ಶಿಗೆ ಪೇಸ್ಟ್ ಹಾಕಿಕೊಂಡು ಟೆರೇಸಿನ ಮೇಲೆ ನಿಂತುಕೊಳ್ಳುತ್ತೇನೆ...

ನಿನ್ನೆ ತಾನೇ ಮೈಸೂರಿನಲ್ಲಿ ಸ್ನೇಹಿತನ ಮದುವೆ ಮುಗಿದಿದೆ, ನಿನ್ನೆ ರಾತ್ರಿ ಹನ್ನೊಂದಕ್ಕೆ ಬೆಂಗಳೂರಿಗೆ ವಾಪಸ್ಸು ಬಂದು ಕಟ್ಟಕಡೆಯ ಸಿಟಿಬಸ್ ಹಿಡಿದು, ರೂಮು ಸೇರಿ, ಹಾಸಿಗೆ ನೋಡುವ ಹೊತ್ತಿಗೆ ಹನ್ನೆರಡೂ ಕಾಲು. ಇವತ್ತು ಬೆಳಿಗ್ಗೆ ಬೇಗ ಏಳಬೇಕು, ಎಕ್ಸರ್‌ಸೈಜ್ ತಪ್ಪಿಸಬಾರದು ಅಂದುಕೊಂಡಿದ್ದೆ, ಆದರೆ ಮೊಬೈಲಿನಲ್ಲಿ ಅಲಾರ್ಮ್ ಸೆಟ್ ಮಾಡುವಾಗ ಮಂಗಳವಾರದಿಂದ ಮಾಡಿದರಾಯಿತು ಎಂದು ಏಳಕ್ಕೆ ಅಲಾರ್ಮ್ ಇಟ್ಟಿದ್ದೆ. ಬಿಸಿಲು ಈಗತಾನೇ ಕಣ್ಬಿಡುತ್ತಿದೆ; ಸ್ವಲ್ಪಮಟ್ಟದ ಮಂಜು ದೂರದ ಮನೆಗಳ ಮೇಲೆ, ಬಿಲ್ಡಿಂಗು-ಮರಗಳ ತಲೆಯ ಮೇಲೆ ಕವಿದುಕೊಂಡೇ ಇದೆ; ರಸ್ತೆಗಳಲ್ಲಿ ವಾಹನದಟ್ಟಣೆ-ಶಬ್ದಮಾಲಿನ್ಯ ಇನ್ನೂ ಶುರುವಾಗಿಲ್ಲ.

ಎದುರುಗಡೆ ಬೀದಿಯ ನಾಲ್ಕನೇ ಮನೆಯ ಟೆರೆಸಿನಲ್ಲಿ ಆ ಹುಡುಗಿ ಸ್ನಾನ ಮಾಡಿದ ತಲೆಯನೊರೆಸುತ್ತ ನಿಂತಿದ್ದಾಳೆ, ಮದುವೆಯಾಗಿ ತಿಂಗಳಾಯ್ತು ಅನಿಸುತ್ತೆ. ಹೆಸರು ರೋಶನಿ, ನಾವು ಈ ರೂಮಿಗೆ ಬಾಡಿಗೆ ಬಂದ ಹೊಸತರಲ್ಲಿ, ನನ್ನ ಸ್ನೇಹಿತ ಸುತ್ತಮುತ್ತಲ ಮನೆಗಳಲ್ಲಿರುವ ಎಲ್ಲ ಹುಡುಗಿಯರ ಗಣತಿ ಕಾರ್ಯ ಮಾಡಿದ್ದಾಗ ಗೊತ್ತಾದದ್ದು ಈ ವಿಷಯ! ನಾವೆಲ್ಲ ಬಾಯಿ ಬಾಯಿ ಬಿಟ್ಟಿದ್ದೆವು. ನನಗೆ ನನ್ನ ಪುಸ್ತಕಗಳನ್ನೋದಲು ಟೆರೇಸೇ ಬೇಕು, ಸ್ನೇಹಿತರ ಶಟಲ್ ಆಟ ಕೂಡ ಎಲ್ಲರಂತೆ ಮನೆಯ ಮುಂದಿನ ರಸ್ತೆಯಲ್ಲಲ್ಲದೇ ಈ ಇರುಕು ಟೆರೇಸಿನಲ್ಲೇ ನಡೆಯಬೇಕು. ದಿನಾ ಹೊಸ ಹೊಸ ವಿಷಯಗಳು ಗೊತ್ತಾಗುತಿದ್ದವು- ಮಾರವಾಡಿಗಳ ಮನೆಯದು; ಆ ಹುಡುಗಿಗೊಬ್ಬ ದಡಿಯ ಅಣ್ಣನಿದ್ದಾನೆ; ಈವತ್ತು ಅವಳು ಹೊಸ ತರದ ಜೀನ್ಸ್ ಹಾಕಿದ್ದಾಳೆ; ನಾವು ಟೆರೇಸಿಗೆ ಬಂದದ್ದು ನೋಡಿ ತಂಗಿಯನ್ನು ಕರೆದುಕೊಂಡು ಬಂದಳು; ಅವರ ಮನೆ ಮುಂದೆ ಸಾಗುವಾಗಲೆಲ್ಲ ನಮ್ಮನ್ನೇ ದಿಟ್ಟಿಸಿ ನೋಡುತ್ತಿರುತ್ತಾಳೆ... ತಿಂಗಳ ಹಿಂದೆ ಅವಳ ಮದುವೆಯಾದಾಗ, ಸ್ನೇಹಿತರು ಶಟಲ್ ಬ್ಯಾಟಿಗೆ ಮೊಳೆಹೊಡೆದು ನೇತುಹಾಕಿದ್ದರು; ನಾನು ಓದುತಿದ್ದ ಪುಸ್ತಕವೂ ಮುಗಿದಿತ್ತು! ಬೇಸರವಾದರೂ ಒಪ್ಪಿಕೊಂಡಿದ್ದೆವು- 'ಅಂತ ಹುಡುಗಿ ನಮಗೆಲ್ಲ ಅಲ್ಲ, ಸುಮ್ಮನೇ ನೋಡಿ ಖುಷಿಪಡುವುದು ಅಷ್ಟೇ!' ನಾನೂ ಒಪ್ಪಿಕೊಂಡಿದ್ದೆ, 'ಅವಳು ನನ್ನ ಟೈಪ್ ಅಲ್ಲ!' ಮೊನ್ನೆ ತಾನೇ ಸ್ನೇಹಿತ ಹೇಳುತ್ತಿದ್ದ, 'ಆಚೆ ಮನೆಗೆ ಯಾರೋ ಹುಡುಗಿ, ಬೇಸಿಗೆರಜೆಗಿರಬೇಕು; ಬಂದಿದ್ದಾಳೆ, ಸಕ್ಕತ್ತಾಗಿದ್ದಾಳೆ!'.

ಬಸ್ಸು ಹಿಡಿಯುವ ತರಾತುರಿಯಲ್ಲಿ, ಬೇಗನೇ ಸ್ನಾನ ಮುಗಿಸಿ, ಡಿಯೋ-ಸ್ಪ್ರೇ ಹಾಕಿಕೊಂಡು, ಹೋದವಾರ ಹಾಕಿದ್ದ ಡ್ರೆಸ್ ಒಂದನ್ನೇ ಹಾಕಿಕೊಂಡು ಬಸ್ ಸ್ಟಾಂಡಿಗೆ ಬಂದು ನಿಂತೆ. ದಿನಾ ನಾನು ನೋಡುತಿದ್ದ ಹುಡುಗಿಯೂ ಬಂದು ನಿಂತಿದ್ದಳು, ಜಾನ್ಸ್ ಕಾಲೇಜಿನಲ್ಲಿ ನರ್ಸಿಂಗ್ ಮಾಡ್ತಿದ್ದಾಳೆ, ಹಿಂದೂನೇ. ನಮ್ಮ ಬಡಾವಣೆಯಲ್ಲೇ ಮನೆಯಿರಬೇಕು, ಅವಳ ಕಾಲೇಜ್ ಬಸ್ಸು ನನ್ನ ಸಿಟಿಬಸ್ಸಿನ ಮುಚೆ ಬರುತ್ತದೆ, ಸ್ನಾನ ಮಾಡಿದ ಕೂದಲು, ಹಗುರವಾಗಿ ಹೆಣೆದು ಜಡೆ ಕಟ್ಟಿದ್ದಾಳೆ, ಜಡೆಯ ತುದಿಯಿಂದ ನೀರು ತೊಟ್ಟಿಕ್ಕಿ ಅವಳ ತಿಳಿಗುಲಾಬಿ ಡ್ರೆಸ್ಸನ್ನು ನೆನೆಸಿದೆ, ಹತ್ತಿರ ಸುಳಿದರೆ ಹಗುರವಾದ ಸುಗಂಧ. ಈಕೆ ನಕ್ಕರೆ ಹೇಗೆ ಕಾಣಬಹುದು ಎಂದು ಬಹಳ ತಲೆ ಕೆಡಿಸಿಕೊಂಡಿದ್ದೇನೆ. ಈ ಹುಡುಗಿ ಮಾತ್ರ ನನ್ನೊಬ್ಬನಿಗೇ! ಅಂದರೆ ನನ್ನ ಸ್ನೇಹಿತರಿಗ್ಯಾರಿಗೂ ಈ ಹುಡುಗಿಯ ಬಗ್ಗೆ ಗೊತ್ತಿಲ್ಲ, ಅವರು ಇನ್ನೂ ಇವಳನ್ನು ನೋಡಿಲ್ಲ! ಆದರೆ ಈ ಎರಡು ದಿನದಿಂದ ನನಗೆ ತುಂಬಾ ಬೇಜಾರಾಗಿದೆ, ಯಾಕೆಂದರೆ ಅವಳು ಹೋದ ಗುರುವಾರ ಹಳದಿ ಅಂಚಿನ ಬಿಳಿಸೀರೆಯುಟ್ಟು ಬಂದಿದ್ದಳು, ಮತ್ತು ಹಣೆಯ ಮೇಲೆ ಮಲೆಯಾಳಿಗಳ ಟ್ರೇಡ್ ಮಾರ್ಕ್ 'ಅಡ್ಡನಾಮ'! ಮಲೆಯಾಳಿ ಹುಡುಗಿಯರ ಬಗ್ಗೆ ನನಗೇನೂ ಬೇಸರವಿಲ್ಲ, ಆದರೆ ನಾನು ಕನ್ನಡಿಗ ಹುಡುಗಿಯನ್ನು ಬಿಟ್ಟು ಬೇರೆ ಹುಡುಗಿಯನ್ನು ಪ್ರೇಮಿಸಲಾರೆ (ಮೊದಲ ನೋಟದ ಪ್ರೇಮ ಈಗ ನನಗೆ ಸಾಧ್ಯವಿಲ್ಲ!) ಅಂತ ತೀರ್ಮಾನ ಮಾಡಿದ್ದೇನೆ. ಆಕೆಗೆ ಒಳ್ಳೇ ಹುಡುಗ ಸಿಗಲಿ, ಮತ್ತೊಮ್ಮೆ 'ಅವಳು ನನ್ನ ಟೈಪ್ ಅಲ್ಲ!'

ಬಸ್ಸು ಬಂತು. ಬಸ್ ಹತ್ತಿ, ಕಿಟಕಿ ಕಡೆಗೆ ಕುಳಿತು ಹೊರಗಡೆ ಕಣ್ಣು ಹಾಯಿಸಿದೆ, ಸೋಮವಾರದ ಬೆಳಗಿನ ಮುಂಜಾವು, ಎಲ್ಲ ಹೊಸ-ಹೊಸತು, ಸ್ವಚ್ಛ-ಸ್ವಚ್ಛ, ಕಾಲೇಜು-ಸ್ಕೂಲುಗಳಿಗೆ ಹೋಗುತ್ತಿರುವ ಹುಡುಗರು, ಹುಡುಗಿಯರು, ಕೆಲಸಕ್ಕೆ ಹೊರಟಿರುವ ಹುಡುಗಿಯರು, ಈಗ ತಾನೇ ಬೆಳಗಿನ ವಾಕಿಂಗ್ ಮುಗಿಸಿ ಮನೆಯೆಡೆಗೆ ಹೋಗುತ್ತಿರುವವರು, ಸೂರ್ಯನ ಹೊಂಗಿರಣಗಳು, ಮೆಲ್ಲನೇ ಏಳುತ್ತಿರುವ ಧೂಳು.... ಮುಂದಿನ ಸ್ಟಾಪಿನಲ್ಲಿ ಆ ಹುಡುಗಿ ಬಸ್ ಹತ್ತಿದಳು, ಕಾಲೇಜು ವಿದ್ಯಾರ್ಥಿನಿ, ಸ್ವಲ್ಪ ಗಿಳಿಮೂಗು, ಮೇಲ್ತುಟಿಯ ಅಂಚಿನಲ್ಲಿ ಒಂದು ಸಣ್ಣ ಚುಕ್ಕಿ. ಮೊದಲ ಬಾರಿ ನೋಡಿದಾಗಲೇ ಕಣ್ಸೆಳೆಯುವ ರೂಪು, ಆದರೂ ಆಕೆ ನನ್ನ ಟೈಪ್ ಅಲ್ಲ...(ಮೊನ್ನೆ ಆಕೆಯ ಕತ್ತಿನ ಇಳಿಜಾರಿನಲ್ಲೊಂದು ಕ್ರಾಸ್ ಕಂಡಿತ್ತು!)

ಬಸ್ಸಿಳಿದು ಆಫೀಸ್ ತಲುಪಿ, ಲಿಫ್ಟ್ ಸೇರಿಕೊಂಡೆ, ನನ್ನ ಆಫೀಸಿನ ಮೇಲಿನ ಮಹಡಿಯ ಆಫೀಸಿನ ಸ್ವಾಗತಕಾರಿಣಿ, 'ಮೆಲ್ಲಿಸಾ' ನನ್ನ ಹಿಂದೆ ಓಡಿಬಂದು ಲಿಫ್ಟ್ ಸೇರಿಕೊಂಡಳು, ಪರಿಚಯದ ನಗು ಬೀರಿದಳು. ಆಕೆಯ ದಿರಿಸು-ಮೇಕಪ್‌ಗೇ ನನ್ನ ಸಂಬಳ ಸಾಲುವುದಿಲ್ಲ. 'ಖಂಡಿತವಾಗಿ ಇವಳು ನನ್ನ ಟೈಪ್ ಅಲ್ಲ!'

ವಾರದ ಹಿಂದೆ ನನ್ನ ಸ್ನೇಹಿತನೊಬ್ಬ ಸಿಕ್ಕಿದ್ದ, ಮಾತು ಎಲ್ಲ ಮುಗಿದು ಮದುವೆಯೆಡೆಗೆ ತಿರುಗಿತು. ಅವನ ಮನೆಯವರು ತನ್ನ ಮದುವೆಯ ಬಗ್ಗೆ ಮಾಡುತಿದ್ದ ಪ್ರಯತ್ನಗಳ ಬಗ್ಗೆ ಹೇಳಿಕೊಂಡು ನಕ್ಕ, 'ಎಲ್ಲ ಹುಡುಗಿಯ ಮನೆ, ಕುಟುಂಬದ ಬಗ್ಗೆಯೇ ಚರ್ಚೆ ಮಾಡ್ತಾರೆ, ಆ ಹುಡುಗಿ ಕಾಲೇಜು ಮುಗಿಸಿ, ಓದಿಗೆ ಯಾವುದೇ ಸಂಬಂಧವಿಲ್ಲದ ಕೆಲಸ ಮಾಡುತಿದ್ದಾಳೆ, ನನ್ನ ಹಾಗೆಯೇ ಸಂಗೀತಪ್ರೇಮಿ, ಚೆನ್ನಾಗಿ ಮಾತನಾಡ್ತಾಳೆ, ನೋಡೋಕೂ ಓಕೆ! ಆದರೂ ನನಗ್ಯಾಕೋ ಹಿಡಿಸಲಿಲ್ಲ' ಅಂದ!

'ಸರಿ, ನಿನ್ನ ಹುಡುಗಿ ಹೇಗಿರಬೇಕು?' ಎಂದು ಕೇಳಿದ್ದಕ್ಕೆ ತುಂಬ ಚಿಂತಿತನಾದ, 'ನಮ್ಮ ಎಕ್ಸ್‌ಪೆಕ್ಟೇಷನ್ ತುಂಬ ಜಾಸ್ತಿ ಅನಿಸುತ್ತೆ ಕಣೋ. ನಾವೇನೂ ಜೇಮ್ಸ್‌ಬಾಂಡ್‌ಗಳಲ್ಲ, ಆದರೂ ಜೀವನ ಪರ್ಯಂತ ಜೊತೆಗಿರಬೇಕಾದ ಸಂಗಾತಿ ಹುಡುಕುವಾಗ ಭಯ ಆಗುತ್ತೆ, ತಡೆದು ನೋಡೋಣ ಅನ್ನಿಸುತ್ತೆ. ಒಂದೊಂದು ಹುಡುಗಿ ನೋಡಿದಾಗಲೂ ಏನೋ ಕೊರತೆಯಿದೆ ಅನ್ನಿಸುತ್ತೆ, ಅಪ್ಪ-ಅಮ್ಮಂದಿರಿಗೇ ಬಿಟ್ಟು ಬಿಡೋಣ ಅಂದ್ರೆ ನನಗಿಷ್ಟವಾಗೋಲ್ಲ ಅನ್ನೋ ಭಯ! ನನಗೆ ಇಷ್ಟವಾಗುವ ಹುಡುಗಿ ನಮ್ಮ ಮನೆಯ ಸದಸ್ಯಳಾಗ್ತಾಳಾ? ಅವಳ-ನನ್ನ ಕುಟುಂಬದ ವೇವ್‌ಲೆಂತ್ ಒಂದೇ ಇರುತ್ತಾ ಅನ್ನೋ ಭಯ ಬೇರೆ.' ಅಂದು ನಿಟ್ಟುಸಿರು ಬಿಟ್ಟ! 'ಈಗ ಲವ್ ಮಾಡೋದೂ ಸಾಧ್ಯವಾಗದ ಮಾತು, ಕಾಲೇಜಿನಿಂದ ಹೊರಬಂದು ಕೆಲಸ ಅಂತ ಶುರುವಾದ ಮೇಲೆ ನಾವೆಲ್ಲರೂ ಮೆಚ್ಯೂರ್ ಆಗಿಬಿಡ್ತೇವೆ, ಮೊದಲ ನೋಟದ ಪ್ರೇಮ ಈಗ ಸಾಧ್ಯವಾಗೋಲ್ಲ, ಎಲ್ಲವನ್ನೂ ಅಳೆದು ತೂಗಿ ಪ್ರೀತಿಯನ್ನು ಅರಸವುದು ತುಂಬ ಕಷ್ಟದ ಕೆಲಸ' ಅಂತ ಬೇರೆ ಮಾತು ಸೇರಿಸಿದ...ನಾನು ಮೌನವಾಗಿ ಅವನ ಸಿದ್ಧಾಂತವನ್ನು ಒಪ್ಪಿಕೊಂಡಿದ್ದೆ, ಮನಸಿನಲ್ಲಿದ್ದ ಭಾವವೊಂದು ಅರಸುತಿತ್ತು 'ಯಾವ ಮೋಹನ ಮುರಲಿ ಕರೆವುದೋ...?'

ಕಂಪ್ಯೂಟರ್ ಆನ್ ಮಾಡಿ, ಇ-ಮೇಲ್‌ಗಳ ನೋಡುತಿದ್ದಾಗ, 'ಜೀವನ್‌ಸಾಥಿ'ಯಿಂದ ಬಂದಿದ್ದ ಈ-ಮೇಲ್ ಸಿಕ್ಕಿತು, ಆರು ವಿವಾಹಾರ್ಹ ಹುಡುಗಿಯರ ವಿವರಗಳು! ಫೋಟೊ ಇದ್ದ ಮೂರು ಪ್ರೊಫೈಲ್‌ಗಳನ್ನು ತೆರೆದು ನೋಡಿದೆ, 'ಫ್ಯಾಶನ್ ಡಿಸೈನರ್, ಗೋಧೀ ಮೈಬಣ್ಣ, ಅಪ್ಪ ಕಾಂಟ್ರಾಕ್ಟರ್; ಸ್ಕೂಲ್ ಟೀಚರ್, ಒಬ್ಬಳೇ ಮಗಳು, ಅಪ್ಪ ಇಲ್ಲ; ಡಿಗ್ರಿ ಮುಗಿದು ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತಿದ್ದಾಳೆ ಈಕೆ ನಾಲ್ಕು ಜನ ಅಕ್ಕಂದಿರ ಮುದ್ದಿನ ತಂಗಿ;' ನಾನು ನೋಡುತ್ತಿರುವಾಗಲೇ ನನ್ನ ಪಕ್ಕದಲ್ಲೇ ಕುಳಿತು ಕೆಲಸ ಮಾಡುವ 'ಸೋಫಿಯ' ಬಂದಳು, ತಟ್ಟನೇ ಜೀವನ್‌ಸಾಥಿಯನ್ನು ಮುಚ್ಚಿಬಿಟ್ಟೆ. ಆಕೆ ನೋಡಿಬಿಟ್ಟರೆ ಮದ್ಯಾಹ್ನದ ಊಟದ ನಂತರದ ವಾಕಿಂಗ್‌ನ ಹರಟೆಗೆ ಬಿಸಿ ಬಿಸಿ ಸುದ್ದಿ ನಾನೇ ಆಗಿಬಿಡ್ತೀನಿ!

ಹೊಸದಾಗಿ ಈ ಆಫೀಸಿಗೆ ಬಂದಾಗ ಸ್ನೇಹಿತರೆಲ್ಲ ನನ್ನ ತಲೆ ತಿಂದಿದ್ದರು, 'ಹೊಸ ಆಫೀಸಿನ ಹುಡುಗಿಯರು ಹೇಗಿದ್ದಾರೆ?' ನನ್ನ ಹಳೇ ಕೆಲಸಕ್ಕಿಂತ ಜಾಸ್ತಿ ಹುಡುಗಿಯರು ಇಲ್ಲಿದ್ದಾರೆ ಎಂದಮೇಲಂತೂ, ನಾನು ಎಷ್ಟು ಸಲ ವಿವರಿಸಿದರೂ ದಿನದ ಅಪ್‌ಡೇಟ್ ಕೊಡಲೇ ಬೇಕು, 'ಹುಡುಗಿಯರ ಡ್ರೆಸ್; ವಾಕಿಂಗ್‌ನಲ್ಲಿ ನಡೆದ ಸರಸ ಸಂಭಾಷಣೆಗಳು; ವಿನುತನಿಗೆ ಬಂದಿದ್ದ ಪ್ರಪೋಸಲ್ ಒಪ್ಪಿಕೊಂಡಳೇ? ಭರತನಾಟ್ಯಕೋವಿದೆ ಹೇಗಿದ್ದಾಳೆ? ನಿನ್ನ ಡ್ರೆಸ್ ನೋಡಿ ಏನೆಂದರು? ಆಹಾ ಸುರ ಸುಂದರಾಂಗ ನೀನು, ನಾವಿರಬೇಕಾಗಿತ್ತು! ಏನೂ? ನಿನಗೆ ನಿನ್ನದೇ ಟೇಸ್ಟಿನ ಅವಳ ಸ್ನೇಹಿತೆಯೊಬ್ಬಳ ಪರಿಚಯ ಮಾಡಿಸಿಕೊಡುತ್ತಾಳಾ?! ಲಕ್ಕೀ ಫೆಲೋ!'

ಆದರೆ ಅವರಿಗೂ, ನನಗೂ ನನ್ನ ಆಫೀಸಿನ ಹುಡುಗಿಯರಿಗೂ ಸ್ಪಷ್ಟವಾಗಿ ಗೊತ್ತು, ಇದು ಒಂದೇ ಕಣ್ಣೋಟದಲ್ಲಿ ಜರುಗುವುದಲ್ಲ; ಇನ್ನು ಒಂದೇ ಭೇಟಿಯಲ್ಲಿ ಹೃದಯಗಳು ಮಿಡಿಯುವುದು ತುಂಬ ದೂರದ ಮಾತು, ಬಹುಶಃ ಸಾವಿರಕ್ಕೊಂದು. ಹಾಗಾಗಿಯೇ ಅವರೆಲ್ಲ ನನ್ನ ತುಂಬ ಒಳ್ಳೆಯ ಸಹೋದ್ಯೋಗಿಗಳು, ಸ್ನೇಹಿತರು ಮಾತ್ರ! ನಾವೆಲ್ಲ ನಮ್ಮೆಲ್ಲರ ಕನಸು, ಭವಿಷ್ಯದ ಬಗ್ಗೆ ನಮಗಿರುವ ಕಲ್ಪನೆಗಳನೆಲ್ಲ ಹರಡಿಕೊಂಡು ಮಾತನಾಡುವಾಗ ಇದನ್ನೆಲ್ಲ ನೋಡಿ ಪ್ರತೀದಿನ ಅಚ್ಚರಿಗೊಳ್ಳುವ ನನ್ನ ಸ್ನೇಹಿತೆಯೊಬ್ಬಳು ಆಗಾಗ ಪಲುಕುತ್ತಿರುತ್ತಾಳೆ, 'ನಾವು ಒಬ್ಬೊಬ್ಬರೂ ಎಷ್ಟೊಂದು ವಿಭಿನ್ನ! ಎಷ್ಟ್ ಚೆನ್ನಾಗಿದೆ ಅಲ್ವಾ?' ನನ್ನ ಮನಸಿನ ಅದೇ ಭಾವ ಮೆಲ್ಲನುಸುರುತ್ತದೆ, 'ಯಾವ ಮೋಹನ ಮುರಲಿ ಕರೆವುದೋ...?'

ಮದುವೆಯ ಮಾತನಾಡುವ ಅಮ್ಮನಿಗೆ ಗೊತ್ತು, ನನಗೆ ನನ್ನ ಸಂಜೆ ಕಾಲೇಜಿನ ಡಿಗ್ರಿ ಮುಗಿಯುವ ತನಕದ ಕಾರಣವಿದೆ ಅಂತ, ಹಾಗೆಂದೇ ಕೆಲವೊಮ್ಮೆ ಹೇಳುತ್ತಿರುತ್ತಾಳೆ, ಇಂಜಿನಿಯರಿಂಗ್‌ನ ಕೊನೇ ಪರೀಕ್ಷೆ ಮುಗಿದ ಕೂಡಲೇ ಮದುವೆ! ನಾನು ನಕ್ಕು ತಲೆಯಾಡಿಸುತ್ತೇನೆಯಾದರೂ ಮನಸಿನಲ್ಲಿ ಭಯವಿದ್ದೇ ಇದೆ. ಈ ವರ್ಷಗಳುದ್ದಕ್ಕೂ ಸಿಗದವಳು ಆಗ ಸಿಕ್ಕು ಬಿಡುತ್ತಾಳೋ? ಎಲ್ಲಿದ್ದಾಳೋ? ಹೇಗಿದ್ದಾಳೋ?

ಸಂಜೆ ಕೆಲಸ ಮುಗಿಸಿ ರೂಮಿಗೆ ಬಂದು ಅದೇ ಹಳೇ(!) ಸ್ನೇಹಿತರೊಡನೇ ಹರಟೆಕೊಚ್ಚುತ್ತ ಅನ್ನಕ್ಕೆಂದು ಕುಕ್ಕರ್ ಜೋಡಿಸುವಾಗ ನಿನ್ನೆ ನಡೆದ ಸ್ನೇಹಿತನ ಮದುವೆಯ ನೆನಪು ಬಂತು, ನಿನ್ನೆ ನಾನು ನನ್ನ ಸ್ನೇಹಿತನ (ಮದುಮಗನ) ತಾಯಿಯ ಕೈಯಲ್ಲಿ ಬೈಸಿಕೊಂಡಿದ್ದು ಮತ್ತೆ ಎಲ್ಲರ ನಗುವಿಗೆ ಕಾರಣವಾಯ್ತು. ನಡೆದದ್ದಿಷ್ಟೇ, ಮದುವೆಯ ಹಿಂದಿನ ದಿನದ

ರಿಸೆಪ್ಷನ್‌ನಲ್ಲಿಯೇ ಮದುಮಗಳ ಸ್ನೇಹಿತೆಯರ ಗುಂಪಿನೊಳಗೆ ನಾನೊಂದು ಹುಡುಗಿಯನ್ನು ನೋಡಿದೆ, ತಿಳಿ ಹಸಿರು ಬಣ್ಣದ ಸಲ್ವಾರ್, ಹಗುರವಾಗಿ ಹೆಣೆದಿದ್ದ ಜಡೆ, ಕಿವಿಗಳಲ್ಲಿ ಅಲುಗಾಡುವ ಜುಮುಕಿಗಳು, ನಗು, ನಾನವಳನ್ನು ಗಮನಿಸುತ್ತಿದ್ದುದು ನನ್ನ ಸ್ನೇಹಿತರ ಗಮನಕ್ಕೂ ಬಂದಿತ್ತು, ಮತ್ತು ಅವಳ ಗಮನಕ್ಕೂ ಕೂಡ! ಮರುದಿನ ಮದುವೆಯಲ್ಲಿ ಗಾಢ–ಕೆಂಪು ಬಣ್ಣದ, ಹಗುರವಾದ ರೇಶಿಮೆ ಸೀರೆಯುಟ್ಟು ಆಚೀಚೆ ತಿರುಗಾಡುತ್ತಿದ್ದ ಅವಳ ಫೋಟೋ ತೆಗೆಯಲು ನಾನು ಬಹಳ ಪರಿಪಾಟಲು ಪಟ್ಟಿದ್ದೆ, ಮಂಟಪದ ಮುಂದೆ, ಮದುಮಗಳ ಜೊತೆಗೆ ಅವಳಿರುವಾಗಲೆಲ್ಲ ಮದುವೆಯ ಫೋಟೋ ತೆಗೆಯುವಂತೆ ನಟಿಸುತ್ತ ಕಷ್ಟಪಟ್ಟೆ, ನಾನು ಕ್ಯಾಮೆರಾ ಎತ್ತಿದಾಗಲೆಲ್ಲ ಅವಳು ಬದಿಗೆ, ಅಥವಾ ಮದುಮಗಳ ಹಿಂದಕ್ಕೆ ಸರಿದುಕೊಂಡು ಬಿಡುತ್ತಿದ್ದಳು. ಹೀಗೇ ಕಣ್ಣಾಮುಚ್ಚಾಲೆಯಲ್ಲೇ ಮದುವೆಯಾಗಿ, ಊಟವೂ ಆಯಿತು. ನನ್ನ ಸ್ನೇಹಿತರು ಸುಮ್ಮನಿರಲಾರದೇ ಅವಳ ಹೆಸರು ಇತ್ಯಾದಿಗಳನ್ನು ನನ್ನ ಸ್ನೇಹಿತ(ಮದುಮಗ)ನ ತಾಯಿಯೊಂದಿಗೆ ವಿಚಾರಿಸುವಂತೆ ನನ್ನನ್ನು ಒತ್ತಾಯಿಸಿದರು. ಮೋಹಕ್ಕೆ ಬಿದ್ದು ನಾನೂ ಸ್ನೇಹಿತನ ತಾಯಿಯನ್ನು ಅನುನಯದಿಂದ ಕರೆದುಕೊಂಡುಬಂದೆ, ‘ಆಂಟೀ, ನನಗೊಬ್ಬಳು ಹುಡುಗಿ ಇಷ್ಟವಾಗಿದ್ದಾಳೆ’. ಅವರಿಗೆ ಖುಷಿಯಾಯ್ತು. ‘ಹೌದೇನೋ? ಎಲ್ಲಿದ್ದಾಳೆ?.’ ‘ಇಲ್ಲೇ ಮದುವೆ ಮನೆಯಲ್ಲೇ.’ ‘ಹೌದಾ? ಎಲ್ಲಿದ್ದಾಳೆ ತೋರಿಸು?’ ಅವರನ್ನು ಕರೆದುಕೊಂಡುಹೋಗಿ ದೂರದಿಂದಲೇ ಅವಳನ್ನು ತೋರಿಸಿದೆ, ‘ಅಲ್ಲಿ ಆಂಟೀ, ಆ ಮರೂನ್ ಕಲರ್ ಸೀರೆ..’ ‘ಕಪಾಳಕ್ಕೆ ಎರಡು ಬಿಗಿತೀನಿ ನೋಡು!’, ಗುಡುಗಿಬಿಟ್ಟರು ಸ್ನೇಹಿತನ ತಾಯಿ! ‘...ಅವಳು ನಮ್ಮ ಜಾತಿ, ಅದ್ಹೇಗೆ ಆಗುತ್ತೆ? ನಿಮ್ಮಮ್ಮನಿಗೆ ಬೇಜಾರಾಗೋಲ್ವೇ? ಆ ಹುಡುಗಿ ಅನ್ಬೇಡ. ಅದೇ ರೂಪಿನ ಹುಡುಗಿಬೇಕು ಅನ್ನು, ನಿಮ್ಮ ಜಾತಿಯಲ್ಲೇ ಹುಡುಕಿಕೊಡ್ತೀನಿ!’ ಅಂದುಬಿಟ್ಟರು. ನಾನು ಪೆಚ್ಚಾಗಿ ನೋಡುತ್ತಿದ್ದಂತೆಯೇ (ಹಿಂದೆ ಹೊಂಚುಹಾಕಿಕೊಂಡು ನಮ್ಮನ್ನೇ ಹಿಂಬಾಲಿಸುತ್ತಿದ್ದ ನನ್ನ ಕಳ್ಳಸ್ನೇಹಿತರೊಡಗೂಡಿ) ಜೋರಾಗಿ ನಕ್ಕುಬಿಟ್ಟರು!

ಮದುವೆಯ ವಿಷಯವೇ ನಮ್ಮ ಅಡಿಗೆ ಆಗಿ ಊಟ ಮುಗಿದು ಮಲಗುವ ತನಕದ ನಮ್ಮ ಹರಟೆ–ಮಾತು–ಚರ್ಚೆಗೆ ವಿಷಯವಾಯ್ತು. ನಿನ್ನೆ ಕಡಿಮೆಯಾದ ನಿದ್ದೆಯಿಂದಾಗಿ ಟೀವಿ ನೋಡೋದು ಬೇಡವೆಂದು ಬೇಗ ಹಾಸಿಗೆಗೆ ಉರುಳಿಕೊಂಡೆವು. ನನಗೆ ಗೊತ್ತು–ಎಲ್ಲರ ಕಣ್ಣಮುಂದೆ ಸ್ನೇಹಿತನ ಮದುವೆಯ ದೃಶ್ಯ ಮತ್ತು ಎಲ್ಲರ ಮನಸೂ ನುಡಿಯುತ್ತಿದೆ, ‘ಯಾವ ಮೋಹನ ಮುರಲಿ ಕರೆವುದೋ...?’